MR. SPEAKER —You have done your job. In fact you have been able to participate in the discussion. You have taken sixty minutes It may be important. My request is, please come and discuss this tomorrow morning in my chamber. Hon. Member Chowdaiah.....

SRI A. LAKSHMISAGAR.—This is a simple matter. The letter must be placed on the table. That is the Rule. I am very sorry Sir, that is a very simple matter.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಈಗ ಅವರು ಪತ್ರವನ್ನು ತಮ್ಮ ಕಡೆಗೆ ಕೊಟ್ಟಿದ್ದಾರೆ. ಒಂದು ಸಲ ಅವರು ಕೊಟ್ಟಮೇಲೆ ಅದನ್ನು ತಾವು ತಮ್ಮ ಕಸ್ಟಡಿಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ, ಅವರು ಅದನ್ನು ಇಲ್ಲಿ ಓದಿದ ಮೇಲೆ, ಅದು ಈ ಸಭೆಯ ಪ್ರಾಪರ್ಟಿ ಆಗುತ್ತದೆ. ಆದ್ದರಿಂದ.....

ಅಧ್ಯಕ್ಷರು.—ತಾವು ಅವರಿಂದ ಗಡಿಯಾರವನ್ನೂ ಸಹ ತೆಗೆದುಕೊಳ್ಳಿ ಎಂದು ಹೇಳಿದ್ದೀರಿ. ಈಗ ಅವರು ನನಗೆ ಪತ್ರ ಒಂದನ್ನು ಏನು ಕೊಟ್ಟಿದ್ದಾರೆ, ಅದನ್ನು ಮತ್ತೆ ವಾಪಸ್ ಕೊಡಿ ಏಂಬ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ಪ್ರಕಾರ ವಾಪಸ್ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇದನ್ನೆಲ್ಲಾ ತಾವು ನನ್ನ ಛೇಂಬರ್‌ನಲ್ಲಿ ಬಂದು ಮಾತನಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ತಾವು ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಇಲ್ಲಿಯೇ ಪ್ರಸ್ತಾಪ ಮಾಡಬೇಕಾಗುತ್ತದೆ. ೨೦ಳ ನೇ ನಿಯಮದ ಪ್ರಕಾರ if a letter is read in the House, it is the property of the House.

ಅಧ್ಯಕ್ಷರು.—ತಾವು ಸೀನಿಯರ್ಸ್ ಮೆಂಬರ್ ಇದ್ದೀರಿ. ಈ ದಿನ ಮತ್ತೆ ಮೂರೂವರೆ ಗಂಟೆಗೆ ಬಿಸ್‌ನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್ ಸೇರಬೇಕಾಗಿದೆ. ಹೋದ ಸಲದ ಮೀಟಿಂಗ್‌ನಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರ ಆಯವ್ಯಯ ಪತ್ರದ ಮೇಲಿನ ಚರ್ಚೆ ಇವೊತ್ತು ಮುಗಿದು ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಈ ಕಾರಣದಿಂದಲೇ ಈವೊತ್ತು ಸಭೆ ೧೨ ಗಂಟೆಗೆ ಸೇರಿದ್ದು. ಆದರೆ ಕಾರಣಾಂತರದಿಂದ ಎರಡೂವರೆ ಗಂಟೆ ಸಮಯವನ್ನು ಬೇರೆ ವಿಚಾರಕ್ಕಾಗಿ ಕಳೆದಿದ್ದೇವೆ. ಈಗ ತಾವು ಪ್ರಸ್ತಾಪ ಮಾಡುತ್ತಿರುವ ವಿಚಾರ ಮುಖ್ಯವಾದ ವಿಚಾರ ಅಲ್ಲ ಎಂದು ನಾನು ಹೇಳುತ್ತಿಲ್ಲ. ನಿಯಮದ ಪ್ರಕಾರ ಅದು ಯೋಗ್ಯವಾದಂಥ ವಿಚಾರವೇ ಇರಬಹುದು; ಈ ಕಾರಣದಿಂದಲೇ ನಾನು ಈ ಬಗ್ಗೆ ನನ್ನ ಛೇಂಬರ್‌ನಲ್ಲಿ ಮಾತನಾಡೋಣ ಎಂದು ಹೇಳಿದ್ದು. ತಾವೂ ಕೂಡ ಬನ್ನಿ, ಮಾನ್ಯ ಲಕ್ಷ್ಮೀಸಾಗರ ಅವರೂ ಸಹ ಬರಲಿ, ಎಲ್ಲರೂ ಸೇರಿ ಇದರ ಬಗ್ಗೆ ಮಾತನಾಡೋಣ. ಈಗ ೨ಳ ನೇ ತಾರೀಖಿನ ದಿವಸ ಆಯವ್ಯಯದ ಮೇಲೆ ಮಾತನಾಡಬೇಕಾಗಿದ್ದವರು, ಅವಕಾಶ ಸಿಗದೆ ಇವೊತ್ತಿನವರೆಗೂ ಕಾಯುತ್ತಿದ್ದಾರೆ. ಆದಕಾರಣ ಅವರಿಗೆಲ್ಲಾ ಅವಕಾಶ ಮಾಡಿಕೊಡಬೇಕಾಗಿದೆ.

ಶ್ರೀ ಪಿ. ರಾಮದೇವ್.—ನಮ್ಮ ಪಕ್ಷದಿಂದ ೧೩ ಜನರು ಮಾತನಾಡಬೇಕಾಗಿತ್ತು ಆದರೆ ಇಲ್ಲಿಯವರೆಗೆ ಇಬ್ಬರಿಗೆ ಮಾತ್ರ ಮಾತನಾಡಲು ಅವಕಾಶ ಸಿಕ್ಕಿದೆ.

ಅಧ್ಯಕ್ಷರು.—ಹಾಗೆ ಲೆಕ್ಕ ಹಾಕುವುದಾದರೆ, ಇಲ್ಲಿರುವಂತಹ ಸದಸ್ಯರನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು, ಸಮಯ ನಿಗದಿ ಮಾಡುವುದಾದರೆ..... In fact you have taken more than half the time allowed for the discussion.

(iii) Short Weighment of Cement Packed by Ammasandra Cement Factory.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆಯಿಂದ ಹೊರಬರತಕ್ಕಂಥ ಸಿಮೆಂಟಿನ ತೂಕದಲ್ಲಿ ಮೋಸವಾಗುತ್ತಿದೆ. ನೆನ್ನೆ ದಿವಸ ನನ್ನ ಎದುರಿಗೆ ಮಂಡ್ಯದಲ್ಲಿ ಅವರು ಕಳುಹಿಸಿದ ೧೦ ಟನ್ ಸಿಮೆಂಟ್‌ನ್ನು ತೂಕ ಹಾಕಿ ನೋಡಿದಾಗ, ೮ ಟನ್ ಮಾತ್ರ ಇತ್ತು.

ಅಂದರೆ ಎರಡು ಟನ್ ಕಡಿಮೆ ಇತ್ತು. ನಾನು ಬೆಂಗಳೂರಿಗೆ ಬಂದಮೇಲೆ ಇಲ್ಲಿಯೂ ಸಹ ಎಲ್ಲರೂ ಅದು ತೂಕದಲ್ಲಿ ಕಡಿಮೆ ಇರುತ್ತದೆಂಬ ಮಾತನ್ನೇ ಹೇಳುತ್ತಿದ್ದಾರೆ. ಮಂಡ್ಯ ನಗರ ಅಮ್ಮಸಂದ್ರಕ್ಕೆ ದೂರದಲ್ಲಿರುವುದರಿಂದ ಈ ರೀತಿಯಾಗುತ್ತಿದೆಯೇ ಅಥವಾ ಇದಕ್ಕೆ ಬೇರೆ ಕಾರಣವೇನು ಎಂಬುದನ್ನು ಸರ್ಕಾರದವರು ತನಿಖೆ ಮಾಡಬೇಕು. ಇಲ್ಲದಿದ್ದರೆ ಬಳಕೆದಾರರಿಗೆ ತೊಂದರೆಯಾಗುತ್ತದೆ

ಅಧ್ಯಕ್ಷರು.—ಈ ಬಗ್ಗೆ ತಾವು ಒಂದು ಪತ್ರ ಬರೆಯಿರಿ. ಸರ್ಕಾರದವರು ಉತ್ತರ ಕೊಡುತ್ತಾರೆ.

SRI M. VEERAPPA MOILA.—We have taken note of this, Let him write to the Government.

ಶ್ರೀ ಎಚ್. ಡಿ. ಚೌಡಯ್ಯ.—ನಾನು ಪತ್ರ ಬರೆಯುತ್ತೇನೆ. ಆದರೆ ಈ ಸದನದಲ್ಲಿ ನಾನು ತಮ್ಮ ಮುಖಾಂತರ ಪ್ರಸ್ತಾಪ ಮಾಡಿದ ಮೇಲೆ, ಅದು ಸರ್ಕಾರದ ಗಮನಕ್ಕೆ ಬರುವುದಿಲ್ಲವೇ ? ಆದರೂ ಸಹ ಮಾನ್ಯ ಮಂತ್ರಿಗಳು ಪತ್ರ ಬರೆಯಿರಿ ಎಂದು ಹೇಳಬಹುದೇ ?

SRI M. VEERAPPA MOILY.—The Government has taken note of all these things. And if you have any further particulars, it would be better if you supply it.

ಅಧ್ಯಕ್ಷರು.—ಅವರು ನೋಟ್ ಮಾಡಿಕೊಂಡಿದ್ದಾರೆ. ಆದರೂ ಸಹ ತಮ್ಮ ಪತ್ರದ ಜೊತೆ ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಳಿದ್ದರೆ ಬರೆದು ಕಳುಹಿಸಿ ಎಂದು ಅವರು ಹೇಳಿದ್ದು.

CALLING ATTENTION TO A MATTER OF URGENT PUBLIC IMPORTANCE

re:—Increase in the rate of Cattle feeds.

SRI A. LAKSHMISAGAR (CHICKPET).—Sir, I call the attention of the Minister for Law, Parliamentary Affairs, Veterinary and Animal Husbandry to the increase in the rate of Cattle feeds like Oil Cake, Green Grass *etc*, for the last six months causing hardship to farmers:

† SRI Y. RAMAKRISHNA(Minister for Law, Parliamentary Affairs, Veterinary and Animal Husbandry):—Sir, in notification No. F F D 15 C O M 80, dated 7th January, 1981, restrictions on the export of cattle fodder like ragi hay, paddy straw, kadabi, maize hay, jowar hay, hay and rice husk, gram husk, wheat bran and deoiled rice bran have been imposed. The question of fixing the price of wheat bran is being examined by Government. In the mean while the Director of Food and Civil Supplies has in consultation with the millers fixed up a tentative selling price of Rs. 90/- per quintal for wheat bran.

The question of bringing the feed ingredients of live-stock and poultry feed under the Essential Commodities Act is under active consideration of Government.